ಕರ್ನಾಟಕ ವಿಧಾನಸಭೆ

ಸೋಮವಾರ 29ನೇ ಜುಲೈ 2002 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು ಪೀಠದಲ್ಲಿ ಉಪಸ್ಥಿತರಿದ್ದರು

ಸಂತಾಪ ಸೂಚನೆ

ಭಾರತದ ಉಪರಾಷ್ಟ್ರಪತಿ ಶ್ರೀ ಕೃಷ್ಣಕಾಂತ್‌ರವರ ನಿಧನ

ಅಧ್ಯಕ್ಷರು : ಈಗ ಸಂತಾಪ ಸೂಚನೆ.

ಭಾರತದ ಉಪರಾಷ್ಟ್ರಪತಿ ಹಾಗೂ ರಾಜ್ಯ ಸಭೆಯ ಸಭಾಪತಿಗಳಾಗಿದ್ದ ಶ್ರೀ ಕೃಷ್ಣಕಾಂತ್ ಅವರು 28ನೇ ಫೆಬ್ರವರಿ 1927ರಲ್ಲಿ ಪಂಜಾಬಿನ ಅಮೃತಸರ ಜಿಲ್ಲೆಯ ಕೋಟ್ ಮಹಮದ್ ಖಾನ್‌ನಲ್ಲಿ ಜನಿಸಿದ್ದು, ಲಾಹೋರ್ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ಒಬ್ಬ ವಿಜ್ಞಾನಿ ಹಾಗೂ ಸಮಾಜ ಸೇವಕರಾಗಿ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗ ವಹಿಸಿದ್ದು ಹಲವಾರು ಬಾರಿ ಜೈಲುವಾಸವನ್ನು ಅನುಭವಿಸಿರುತ್ತಾರೆ. ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದು ದೆಹಲಿ, ಪಂಜಾಬ್, ಪಾಂಡಿಚೇರಿ, ಷಿಲ್ಲಾಂಗ್‌ನ ನಾರ್ಥ್‌ಈಸ್ಟರ್ನ್ ಹಿಲ್ ವಿಶ್ವವಿದ್ಯಾನಿಲಯಗಳ ಮತ್ತು ಚೆನ್ನೈನಲ್ಲಿರುವ ಗಾಂಧಿಗ್ರಾಮ ಗ್ರಾಮೀಣ ಸಂಸ್ಥೆಯ ಕುಲಾಧಿಪತಿಗಳಾಗಿ ಸೇವೆ ಸಲ್ಲಿಸಿರುತ್ತಾರೆ.

ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷರುಗಳ ನೇಮಕಾತಿಯ ಆಯ್ಕೆ ಸಮಿತಿ ಹಾಗೂ ಪ್ರಸಾರ ಭಾರತಿ ಮಂಡಳಿಯ ಸದಸ್ಯರುಗಳ ನೇಮಕಾತಿಯ ಸಮಿತಿಗಳಿಗೆ ಅಧ್ಯಕ್ಷರಾಗಿದ್ದರು. ಶ್ರೀಯುತರು ಅನೇಕ ಬಾರಿ ಅಧಿಕೃತವಾಗಿ ನಾನಾ ರಾಷ್ಟ್ರಗಳಿಗೆ ಭೇಟಿ ನೀಡಿದ್ದರು. ಶ್ರೀಯುತರು ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ರಾಜಕೀಯ, ಸಾಮಾಜಿಕ, ರಕ್ಷಣೆ, ಚುನಾವಣೆ ಹಾಗೂ ವಿಜ್ಞಾನಗಳ ಕಾರ್ಯನೀತಿಯ ಕುರಿತು ಹಲವಾರು ಪ್ರಮುಖ ದಿನಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಶ್ರೀಯುತರು ಹಲವಾರು ಸಂಘ ಸಂಸ್ಥೆಗಳ ಜೊತೆ ಸಕ್ರಿಯವಾಗಿ ಭಾಗವಹಿಸಿ ಸಮಾಜ ಹಾಗೂ ದೇಶಸೇವೆ ಮಾಡಿರುತ್ತಾರೆ.

ಶ್ರೀಯುತರು ಹರಿಯಾಣ ರಾಜ್ಯದಿಂದ ರಾಜ್ಯಸಭೆಗೆ 1966 ರಿಂದ 1977 ರವರೆಗೆ ಸದಸ್ಯರಾಗಿ, 1977 ರಿಂದ 1980ರವರೆಗೆ ಲೋಕಸಭೆ ಸದಸ್ಯರಾಗಿದ್ದು ಹಲವಾರು ಸಂಸದೀಯ ಸಮಿತಿಗಳಲ್ಲಿ ಸದಸ್ಯರಾಗಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1990 ರಿಂದ 25ನೇ ಜನವರಿ 1997 ರವರೆಗೆ ಆಂಧ್ರಪ್ರದೇಶದ ರಾಜ್ಯಪಾಲರಾಗಿದ್ದ ಶ್ರೀಯುತರು 21ನೇ ಆಗಸ್ಟ್ 1997ರಿಂದ ಭಾರತದ ಉಪರಾಷ್ಟ್ರಪತಿಯಾಗಿ ಹಾಗೂ ರಾಜ್ಯಸಭೆಯ ಸಭಾಪತಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಶ್ರೀಯುತರು ದಿನಾಂಕ 27ನೇ ಜುಲೈ 2002ರಂದು ನಿಧನ ಹೊಂದಿದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಉಪರಾಷ್ಟ್ರಪತಿ ಕೃಷ್ಣಕಾಂತ್ ಅವರ ಹಠಾತ್ ನಿಧನ ನಮ್ಮ ರಾಷ್ಟ್ರದ ಸಾರ್ವಜನಿಕ ಬದುಕಿನಲ್ಲಿ ಅತ್ಯಂತ ಗಮನೀಯವಾದಂಥ ಪಾತ್ರವನ್ನು ವಹಿಸಿದ್ದ ಒಬ್ಬ ಲೋಕನಾಯಕರನ್ನು ನಾವು ಕಳೆದುಕೊಂಡಂತಾಗಿದೆ. ಕೃಷ್ಣಕಾಂತ್ ಅವರ ಸಹವಾಸವನ್ನು ಮಾಡತಕ್ಕಂಥ ವಿಶೇಷವಾದಂಥ ಅವಕಾಶ ನನಗೆ 1968ರಲ್ಲಿ ಸಿಕ್ಕಿತ್ತು. ಅವರು ಲೋಕಸಭಾ ಸದಸ್ಯರಾಗಿದ್ದರು ಮತ್ತು ನಾನು ಲೋಕಸಭೆಗೆ ಆ ಸಮಯದಲ್ಲಿ ಪ್ರವೇಶ ಮಾಡಿದ್ದೆ. ಕಾಂಗ್ರೆಸ್ಸಿನಲ್ಲಿ ತನ್ನನ್ನು ತಾನೇ ಗುರುತುಮಾಡಿಕೊಳ್ಳುವ ಒಂದು ಯಾಗ ಪ್ರಾರಂಭವಾಗಿತ್ತು. ಕಾಂಗ್ರೆಸ್ ಒಂದು ಸ್ಟೇಟಸ್ಕೊಯಿಸ್ಟ್ ಪಾರ್ಟಿಯಾಗಿ ಮುಂದುವರೆಯಬೇಕೇ ಅಥವಾ ಒಂದು ರಿಫಾರ್ಮಿಸ್ಟ್ ಲಿಬರಲ್ ಡೆಮಾಕ್ರಾಟಿಕ್ - ಈ ಕ್ಷೇತ್ರಗಳಲ್ಲಿ ಹೊಸ ಹೆಜ್ಜೆಯನ್ನು ಶ್ರಮಿಸುವುದರ ಮೂಲಕ ದೇಶಕ್ಕೆ ಒಂದು ಹೊಸ ಮನ್ವಂತರವನ್ನು ಕಲ್ಪಿಸಿಕೊಡಬೇಕೇ ಎನ್ನತಕ್ಕಂಥ ಪ್ರಶ್ನೆಗಳು ಕಾಡುತ್ತಿದ್ದಂಥ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿದ್ದಂಥ ಒಂದು ತರುಣರ ಗುಂಪು ಈ ಸ್ಟೇಟಸ್ಕೊ ವಾದವನ್ನು ಸಾರಾಸಗಟು ತಿರಸ್ಕಾರ ಮಾಡಿ ಕಾಂಗ್ರೆಸ್ ಸಂಸ್ಥೆ ಹೊಸ ಒಂದು ಸಿದ್ಧಾಂತದ ಹರಿಕಾರವಾಗಬೇಕು ಎನ್ನುವ ವಾದವನ್ನು ಮುಂದಿಟ್ಟವರ ಪೈಕಿ ಉಪರಾಷ್ಟ್ರಪತಿ ಕೃಷ್ಣಕಾಂತ್ ಅವರ ಕೊಡುಗೆ ಅಮೋಘವಾದದ್ದು, ಅಮೂಲ್ಯವಾದದ್ದು, ಸ್ಮರಣೀಯವಾದದ್ದು. ಭೂಸುಧಾರಣೆಯಾಗಲಿ, ರಾಜಧನವನ್ನು ರದ್ದು ಮಾಡತಕ್ಕಂಥ ವಿಚಾರವಾಗಲಿ, ಚುನಾವಣಾ ಸುಧಾರಣೆಗಳನ್ನು ಮಾಡಬೇಕು ಎನ್ನತಕ್ಕಂಥ ವಿಚಾರವಾಗಲಿ, ಮಾನವ ಹಕ್ಕುಗಳು - ಇವುಗಳನ್ನು ವಿಸ್ತರಿಸಬೇಕು ಎನ್ನತಕ್ಕಂಥ ಪರಿಕಲ್ಪನೆಯಾಗಲಿ ಇವುಗಳೆಲ್ಲದ್ದಕ್ಕೂ ಕೂಡ ಕೃಷ್ಣಕಾಂತ್ ಅವರು ತಮ್ಮದೇ ಆದಂಥ ಒಂದು ಪರ್ಸನಲ್ ಅಜೆಂಡಾವನ್ನು ಯಾವುದು ಅವರು ಸಿದ್ಧವಾಡಿದ್ದರೋ, ಅವರೂ ಚಂದ್ರಶೇಖರ್‌ರವರು, ಮೋಹನ್‌ಧಾರಿಯಾರವರು, ರಾಮಧನ್‌ರವರು ಇವರುಗಳೆಲ್ಲರೂ ಏನು ಮಾಡಿದರು, ಅದು ಉತ್ತರೋತ್ತರ ರಾಷ್ಟ್ರದ ಅಜೆಂಡಾ ಕೂಡ ಆಯಿತು ಎನ್ನತಕ್ಕದ್ದನ್ನು ನಾವು ಇಂದು ಗುರುತಿಸಬೇಕಾಗಿರತಕ್ಕಂಥಾದ್ದು ಅವಶ್ಯಕ. ಆ ದಿನಗಳನ್ನು ನೆನೆಸಿಕೊಂಡರೆ ರೋಮಾಂಚನವಾಗುತ್ತದೆ. ನಾವು ವಿರೋಧಪಕ್ಷದಲ್ಲಿ ಕುಳಿತಿದ್ದೆವು. ಶ್ರೀಮತಿ ಇಂದಿರಾ ಗಾಂಧಿಯವರು ಮೈನಾರಿಟಿ ಸರ್ಕಾರವನ್ನು ನಡೆಸುತ್ತಿದ್ದಂಥ ಕಾಲ. ಆ ಸರ್ಕಾರ ಈಗ ಬಿದ್ದುಹೋಗುತ್ತದೆ, ನಾಳೆ ಬಿದ್ದುಹೋಗುತ್ತದೆ, ನಾಡದ್ದು ಬೆಳಿಗ್ಗೆ ಬಿದ್ದುಹೋಗುತ್ತದೆ ಎನ್ನುವ ಕುತೂಹಲ. ಏಕೆಂದರೆ ರಾತ್ರಿ ಕಾಗದಗಳು ಓಡಾಡುತ್ತಾ ಇದ್ದಂಥ ಕಾಲ. ನಮ್ಮ ಕಾತರ ಏನು ಎಂದರೆ, ಆಗ ನಾವು ಇನ್ನೂ ಬಹಳ ಚಿಕ್ಕ ವಯಸ್ಸಿನವರು. ನಮ್ಮ ಕಾಳಜಿ ಏನು ನಮ್ಮ ಕಾತುರ ಏನು ನಮ್ಮ ಆತುರ್ ಏನು ಅಂದರೆ ಭೂ ಸುಧಾರಣೆ ಕಾನೂನು ಯಾವಾಗ ಜಾರಿಗೆ ಬರುತ್ತದೆ. ರಾಜಧನ ಯಾವಾಗ ರದ್ದಾಗುತ್ತದೆ. ಬ್ಯಾಂಕ್‌ಗಳ ರಾಷ್ಟ್ರೀಕರಣ ಯಾವಾಗ ಮುಗಿಯುತ್ತದೆ. ಈ ಹತ್ತು ಹಲವಾರು ಸಮಸ್ಯೆಗಳು ನಮ್ಮನ್ನು ಮುತ್ತುತ್ತಿರುವಂತಹ ಕಾಲದಲ್ಲಿ, ಕಾಡುತ್ತಿರುವಂತಹ ಕಾಲದಲ್ಲಿ ನಾವು, ಶ್ರೀಮತಿ ಇಂದಿರಾಗಾಂಧಿಯವರು, ಕೃಷ್ಣಕಾಂತ್‌ರವರು, ಶ್ರೀಚಂದ್ರಶೇಖರ್‌ರವರು ಇವರ ಮೂಲಕ ಆ ಒಂದು ಬಾಣದಲ್ಲಿ ಒಂದು ಸಿಲ್ವರ್ ಲೈನಿಂಗ್ ಅನ್ನು ನಾವು ಕಂಡೆವು. ಆ ಸಿಲ್ವರ್ ಲೈನಿಂಗ್‌ನ್ನು ನಾವು ಗುರುತಿಸಿ, ಆ ಬೆಳ್ಳಿಯ ರೇಖೆಯನ್ನು ನಾವು ಗುರುತಿಸಿ ನಾವು ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರವನ್ನು ಸಮರ್ಥನೆ ಮಾಡಿದೆವು. ಇಂದಿರಾಗಾಂಧಿಯವರ ಸರ್ಕಾರವನ್ನು 1971ನೇ

ಜನವರಿವರೆಗೂ ಮುಂದುವರಿಸಲಿಕ್ಕೆ ನಾವು ಪ್ರಯತ್ನಗಳನ್ನು ಮಾಡಿದಂತಹ ಕಾಲದಲ್ಲಿ ನಮಗೆ ಹೆಚ್ಚು ವಿಶ್ವಾಸವನ್ನು ನಮ್ಮಲ್ಲಿ ಹುಟ್ಟುವ, ಹುಟ್ಟಿಸುವ ಜನಗಳು ಯಾರು ಇದ್ದರು ಅಂದರೆ ಒಂದು ಕಡೆ ಇಂದಿರಾಗಾಂಧಿಯವರು ಮತ್ತೊಂದು ಕಡೆ ಈ ಮಹಾಮಹಿಮರು ಇದ್ದರು. ಆದ್ದರಿಂದಲೇ ಶ್ರೀ ಕೃಷ್ಣಕಾಂತ್‌ರವರ ಬಗ್ಗೆ ನಮಗೆ ವಿಶೇಷವಾದಂತಹ ಪ್ರೀತಿ ಅದು ಮಾನಸಿಕವಾಗಿ, ಸೆಂಟಿಮೆಂಟಲ್ ಆಗಿ ಐಡಲಾಜಿಕಲ್ ಆಗಿ ಕಾಂಗ್ರೆಸ್ಸಿನವರೆಲ್ಲರಿಗೂ ಕೂಡ ಕೃಷ್ಣಕಾಂತ್‌ರವರ ಜೊತೆ ಸಂಬಂಧ ಇತ್ತು. ಆ ಸಂಬಂಧ ಆ ಒಂದು ಬಾರಿ ಈ ಒಂದು ಬಾರಿ ಅದು ವ್ಯತ್ಯಾಸಗಳು ಆಗಿರಬಹುದು ಆದರೆ ಮೂಲಭೂತವಾಗಿ ನಮಗೆಲ್ಲರಿಗೂ ಕೂಡ ಬಹಳ ಪ್ರಿಯವಾಗಿದ್ದಂತಹವರು ಅವರು. ಅವರ ಜೊತೆಯಲ್ಲಿ ಲೋಕಸಭೆಯಲ್ಲಿದ್ದೆ. ಅವರ ಜೊತೆಯಲ್ಲಿ ಕೊನೆಯ ದಿನಗಳಲ್ಲಿ ರಾಜ್ಯ ಸಭೆಯಲ್ಲೂ ಕೂಡ ಅವರು ಅಧ್ಯಕ್ಷರಾಗಿದ್ದಂತಹ ಸಮಯದಲ್ಲಿ ನಾನು ಅಲ್ಲಿಯ ಸದಸ್ಯನಾಗಿದ್ದೆ. ದುರಾದೃಷ್ಟ ಇಂತಹ ಒಬ್ಬ ಮಹಾನ್ ಚೇತನನಿದ್ರೆಯಲ್ಲಿ ಅವರು ನಮ್ಮನ್ನು ಬಿಟ್ಟು ಹೋಗಿದ್ದಾರೆ. ಅವರ ಆದರ್ಶ, ಅವರ ಎಲ್ಲಾ ಆಸೆಗಳು ಆಸೆ ಅಂದರೆ ವ್ಯಕ್ತಿಗತವಾದಂಥ ಆಸೆ ಅಲ್ಲ. ಸಮುದಾಯದ ಪರವಾಗಿ ಏನೆಲ್ಲಾ ಆಸೆಗಳು ಇಟ್ಟುಕೊಂಡಿದ್ದರು ಆ ಆಸೆಗಳು ಎಲ್ಲವನ್ನೂ ಕೂಡ ನಾವು ಸಾಧನೆ ಮಾಡಿದ್ದೇವೆ ಎನ್ನತಕ್ಕಂಥ ಧೈರ್ಯದ ಮಾತುಗಳನ್ನು ಆಡುವುದಕ್ಕೆ ಸಾಧ್ಯವಾಗದಿದ್ದರೂ ಕೂಡ ಆ ಒಂದು ದಿಕ್ಕಿನಲ್ಲಿ ಅಂತಹ ಒಂದು ದಿಗಂತದ ಕಡೆಗೆ ಈ ರಾಷ್ಟ್ರ ಹೆಜ್ಜೆಗಳನ್ನು ಹಾಕಲೇಬೇಕಾಗತಕ್ಕಂಥ ಅನಿವಾರ್ಯ ಪರಿಸ್ಥಿತಿಯನ್ನು ಉಂಟು ಮಾಡಿದವರ ಪೈಕಿ ಒಬ್ಬರು ಶ್ರೀ ಕೃಷ್ಣಕಾಂತ್‌ರವರು. ಅವರ ನಿಧನದಿಂದ ನಮ್ಮ ದೇಶದ ನಮ್ಮ ರಾಷ್ಟ್ರದ ಸಾರ್ವಜನಿಕ ಬದುಕಿನಲ್ಲಿ ಒಂದು ದೊಡ್ಡ ಶೂನ್ಯ ಉಂಟಾಗಿದೆ. ಲಿಟರಲಿ ಒಂದು ದೊಡ್ಡ ಶೂನ್ಯ ಉಂಟಾಗಿದೆ. ಈ ಸರ್ಕಾರದ ಪರವಾಗಿ ಮತ್ತು ನಾನು ಪ್ರತಿನಿಧಿಸತಕ್ಕಂಥ ಕಾಂಗ್ರೆಸ್ಸ್ ಪಕ್ಷದ ಪರವಾಗಿ ಶ್ರೀಕೃಷ್ಣಕಾಂತ್‌ರವರ ನಿಧನಕ್ಕೆ ನನ್ನ ಸಂತಾಪವನ್ನು, ನನ್ನ ಶ್ರದ್ಧಾಂಜಲಿಯನ್ನು ಸಮರ್ಪಣೆ ಮಾಡಿ ಶ್ರೀಮತಿ ಕೃಷ್ಣಕಾಂತ್ ಮತ್ತು ಅವರ ಮನೆಯವರಿಗೆ ನಮ್ಮ ಸಂತಾಪವನ್ನು ತಾವು ರವಾನಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ಕೃಷ್ಣಕಾಂತ್ ಚಿರಾಯುವಾಗಲಿ ಎಂದು ಆಶಿಸಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ ತಾವು ಮಂಡಿಸಿರತಕ್ಕಂಥ ಈ ಒಂದು ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಕೃಷ್ಣಕಾಂತ್‌ರವರು ಒಬ್ಬ ಮಹಾನ್ ನಾಯಕರಾಗಿ, ಈ ದೇಶದ ರಾಷ್ಟ್ರದ ಉಪರಾಷ್ಟ್ರಪತಿಗಳಾಗಿ, ಅದಕ್ಕಿಂತ ಮುಂಚೆ ರಾಜ್ಯಪಾಲರಾಗಿ ಒಬ್ಬ ಹಿರಿಯ ರಾಜಕಾರಣಿಯಾಗಿ ಈ ದೇಶದ ಜನತೆಗೆ ಅತ್ಯಂತ ಚಿರಪರಿಚಿತರಾದ ವ್ಯಕ್ತಿ. ಉಪ ರಾಷ್ಟ್ರಪತಿ ಹುದ್ದೆಯಲ್ಲಿದ್ದಂತಹ ಸಂದರ್ಭದಲ್ಲಿ ಮೃತಪಟ್ಟವರಲ್ಲಿ ಶ್ರೀ ಕೃಷ್ಣಕಾಂತ್ ಮೊದಲಿಗರು. ಈ ಸ್ವಾತಂತ್ರ್ಯದ ಹೋರಾಟದ ನೆನಪನ್ನು ನಾವು ಮಾಡಿಕೊಂಡಾಗ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದಂತಹವರು ಮಾನ್ಯ ಕೃಷ್ಣಕಾಂತ್‌ರವರು. ಮಾನ್ಯ ಕೃಷ್ಣಕಾಂತ್‌ರವರು ವೈಯಕ್ತಿಕವಾಗಿ ಅಷ್ಟೇ ಅಲ್ಲ ಅವರ ಇಡೀ ಕುಟುಂಬ, ಅವರ ತಂದೆಯೂ ಸಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರರು. ಮತ್ತು ಇನ್ನಿತರ ಕುಟುಂಬ ಸದಸ್ಯರೂ ಸಹ ಈ ಒಂದು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ

ಜೈಲು ವಾಸವನ್ನು ಅನುಭವಿಸಿದ್ದರು. ಸ್ವಾತಂತ್ರ ಸಿಕ್ಕ ನಂತರ ಕಾಂಗ್ರೆಸ್‌ನ ನಾಯಕರಾಗಿ ಈ ದೇಶದಲ್ಲಿ ಇರುವಂತಹ ಅನಿಷ್ಟಗಳ ವಿರುದ್ಧ ಹೋರಾಟ ಮಾಡಿದಂತವರು ಶ್ರೀ ಕೃಷ್ಣಕಾಂತ್‌ರವರು. ಮತ್ತು ಕಾಂಗ್ರೆಸ್ಸಿನಲ್ಲಿ ಎಂಗ್‌ಟರ್ಕ್ ಅಂದರೆ ಯುವಕರ ಒಂದು ಗುಂಪು ಕಟ್ಟಿಕೊಂಡು, ಹೊಸ ಚಿಂತನೆಗೆ ಅವಕಾಶ ಮಾಡಿದರು. ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಚಂದ್ರಶೇಖರ್ ಇರಬಹುದು, ಮೋಹನ್ ಧಾರಿಯೂ ಇರಬಹುದು, ರಾಂಧನ್ ಇರಬಹುದು ಶ್ರೀ ಕೃಷ್ಣಕಾಂತ್‌ರವರು, ಈ ನಾಲ್ಕು ಜನ ಪ್ರಮುಖರು ಈ ಎಂಗ್‌ಟರ್ಕ್‌ಗೆ ಅಂದರೆ ದೇಶದಲ್ಲಿ ಹೊಸ ಚಿಂತನೆಗೆ ಅವರ ಪಕ್ಷದಲ್ಲಿ ಇರಬಹುದು ಅಥವಾ ದೇಶದಲ್ಲಿ ಇರಬಹುದು ಒಂದು ಹೊಸ ಚಿಂತನೆಗೆ ಇಂಬು ಕೊಟ್ಟಂತಹದ್ದಕ್ಕೆ ಈ ಎಂಗ್‌ಟರ್ಕ್‌ಗಳದ್ದು ಮಹಾ ಪಾತ್ರ ಇದೆ. ಯಾವ ರೀತಿ ಶ್ರೀಮತಿ ಇಂದಿರಾಗಾಂಧಿಯವರು ಒಂದು ರೀತಿ ಪಕ್ಷದೊಳಗೆ ಒಂದು ರೀತಿಯ ಕ್ರಾಂತಿ ಅಥವಾ ಬದಲಾವಣೆಯನ್ನು ತರುವುದಕ್ಕೆ ಹೊರಟಂತಹ ಸಂದರ್ಭದಲ್ಲಿ ಈ ಎಂಗ್‌ಟರ್ಕ್ಸ್ ಅವರಿಗೆ ಬೆಂಬಲವಾಗಿ ನಿಂತುಕೊಂಡವರು. ಆದರೆ ಅದೇ ಎಂಗ್‌ಟರ್ಕ್ ಮುಂದೆ 1977ರಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾದಂತಹ ಸಂದರ್ಭದಲ್ಲಿ ಆ ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಮಾಡಿದವರು ಹೌದು. ಮಾನ್ಯ ಕೃಷ್ಣ ಕಾಂತ್‌ರವರು ಈ ತುರ್ತು ಪರಿಸ್ಥಿತಿಯ ವಿರುದ್ಧ ದೊಡ್ಡಪ್ರಮಾಣದಲ್ಲಿ ಹೋರಾಟ ಮಾಡಿದರು. ಮತ್ತು ನಿರಂಕುಶವಾದ ಪ್ರಜಾಪ್ರಭುತ್ವ ನಮಗೆ ಬೇಡ ಪ್ರಜಾತಂತ್ರ ವ್ಯವಸ್ಥೆಗೆ ನಾವು ಹೋಗಬೇಕು ಎನ್ನುವಂತಹ ಹೋರಾಟವನ್ನು ಮಾನ್ಯ ಕೃಷ್ಣಕಾಂತ್‌ರವರು ಮಾಡಿದರು. ಮಾನ್ಯ ಜಯಪ್ರಕಾಶ್ ನಾರಾಯಣ್‌ರವರು 1976ರಲ್ಲಿ ಏನು ಒಂದು ಸಂಘಟನೆಯನ್ನು ಮಾಡಿದರು ಸ್ವಾತಂತ್ರ ಮತ್ತು ಪ್ರಜಾಹಕ್ಕು, ಎಂಬ ಒಂದು ಸಂಘಟನೆಯನ್ನು ಅವರು ಸ್ಥಾಪನೆ ಮಾಡಿದರು. ಜಯಪ್ರಕಾಶ್ ನಾರಾಯಣ್‌ರವರು. ಅದಕ್ಕೆ ಪ್ರಧಾನ ಕಾರ್ಯದರ್ಶಿಯಾಗಿ ಆ ಸಂಘಟನೆಗೆ ಹೆಚ್ಚುಶಕ್ತಿಯನ್ನು ಕೊಟ್ಟವರು ಕೃಷ್ಣಕಾಂತ್‌ರವರು. ಹೀಗಾಗಿ ಇವತ್ತು ಕೃಷ್ಣಕಾಂತ್‌ರವರು ತಮ್ಮ ಮನಸ್ಸಿಗೆ ಯಾವುದು ಸರಿ ಎಂದು ಅನ್ನಿಸುತ್ತದೆ ಅದನ್ನು ಹೇಳುವಂತಹ ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿ ಮತ್ತು ರಾಜಕಾರಣದಲ್ಲಿದ್ದು ಸಜ್ಜನಿಕೆಯನ್ನು ರೂಢಿಸಿ ಕೊಂಡಂಥಾದ್ದು ಮತ್ತು ಹಲವಾರು ಸುಧಾರಣೆಗಳಿಗೆ ಇಂಬು ಕೊಟ್ಟವರು ಕೃಷ್ಣಕಾಂತ್‌ರವರು. ಬಹುಶಃ ಅದೇ ದೃಷ್ಟಿಯಿಂದ ಆ ಒಂದು ಹೋರಾಟದ ಪ್ರವೃತ್ತಿ ಅಥವಾ ತಮಗೆ ತಿಳಿದಿದ್ದನ್ನು ಪ್ರತಿಭಟಿಸುವಂತಹ ಪ್ರವೃತ್ತಿ ಇದರಿಂದಾಗಿ ಅವರನ್ನು ಕಾಂಗ್ರೆಸ್ಸಿನಿಂದ ಹೊರ ಹಾಕಲ್ಪಟ್ಟರು. ಅದರೂ ಅವರು ತಮ್ಮ ಒಂದು ವಿಚಾರಧಾರೆಗಳನ್ನು ಹೇಳುವಂತಾದ್ದನ್ನು ಅವರು ಬಿಡಲಿಲ್ಲ ಎನ್ನುವಂತಾದ್ದು ಬಹಳ ಪ್ರಮುಖವಾದುದು. ಮತ್ತು ಆಂಧ್ರಪ್ರದೇಶದಲ್ಲಿ ಮದ್ಯ ವಿರೋಧ ಚಳುವಳಿ ಏನು ನಡೆಯಿತು ಆ ಚಳುವಳಿಯಲ್ಲಿ ಅವರು ಸಾಕಷ್ಟು ಸಕ್ರಿಯವಾಗಿ ಭಾಗವಹಿಸಿದರು. ಮತ್ತು ಇನ್ನೊಂದು ಪ್ರಮುಖವಾಗಿ ಅವರು ದೇಶದಲ್ಲಿ ಭಿತ್ತಿದಂತಹ ವಿಚಾರದ ಅಂದರೆ ಈ ಒಂದು ಚುನಾವಣಾ ಸುಧಾರಣೆ. ಇವತ್ತು ಏನಾಗಿದೆ ಅಂದರೆ ಚುನಾವಣೆ 10 ವರ್ಷಗಳ ಹಿಂದೆ ಇರಬಹುದು, 20 ವರ್ಷಗಳ ಹಿಂದೆ ಇರಬಹುದು ಬಹುಶಃ ಕೃಷ್ಣಕಾಂತರ ಕಾಲದಲ್ಲೂ ಇರಬಹುದು. ಈ ಚುನಾವಣೆಯ ಒಂದು ವ್ಯವಸ್ಥೆ ಆ ಚುನಾವಣೆಯಲ್ಲಿ ಹಣದ ಶಕ್ತಿಯ ಒಂದು ಪ್ರಯೋಗ ಹೀಗಾಗಿ ಚುನಾವಣೆ ಅಂದರೆ ಹಣವಂತರ ಒಂದು ಚುನಾವಣೆ ಎಂದು ಆಗಬಾರದು ಒಬ್ಬ ಪ್ರಾಮಾಣಿಕ, ಆದರ್ಶ ವ್ಯಕ್ತಿ ಚುನಾವಣೆಯಲ್ಲಿ ಆರಿಸಿ ಬರಬೇಕೆನ್ನುವ ದೃಷ್ಟಿಯಿಟ್ಟುಕೊಂಡು ಮಾನ್ಯ ಕೃಷ್ಣಕಾಂತ್‌ರವರು ಕಾಂಗ್ರೆಸ್ಸ್ ಪಕ್ಷದಲ್ಲಿದ್ದಾಗ 1971ರಲ್ಲಿ ತಮ್ಮ

ರಾಷ್ಟ್ರೀಯ ಸಭೆಯಲ್ಲಿ ಈ ಚುನಾವಣೆ ಸುಧಾರಣೆ ಮಾಡಬೇಕು ಹಣವಂತರ ಒಂದು ಪ್ರಭಾವ ತೆಗೆಯಬೇಕು ಎನ್ನುವಂತಹ ಒಂದು ಒತ್ತಾಯವನ್ನು ನಿರ್ಣಯವನ್ನು ಪಾಸ್ ಮಾಡಲಿಕ್ಕೆ ಹೆಚ್ಚು ಮುತುವರ್ಜಿ ವಹಿಸಿದರು. ಮತ್ತು ಈ ಚುನಾವಣೆ ಸುಧಾರಣೆ ಆಗಬೇಕು, ಹಣವಂತರ ಒಂದು ಪ್ರಭಾವ ಕಡಿಮೆ ಆಗಬೇಕು ಎನ್ನುವಂತಹ ಧ್ವನಿ ಎತ್ತಿದವರಲ್ಲಿ ಕೃಷ್ಣಕಾಂತ್ ಮೊದಲ ರಾಜಕಾರಣಿ ಎಂದು ನಾನು ಹೇಳಬಯಸುತ್ತೇನೆ. ಹೀಗಾಗಿ ಅವರು ಏನು ಧ್ವನಿ ಎತ್ತಿದರು ಅದು ಇವತ್ತಿನವರೆಗೂ ಚರ್ಚೆಯಾಗುತ್ತಿದೆ. ಇಂದಿನ ಚುನಾವಣೆ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕು ಹಣದ ಪ್ರಭಾವ ಕಡಿಮೆಯಾಗಬೇಕು ಎನ್ನುವಂತಹ ಮಾತು, ಆ ವಿಚಾರ ಇವತ್ತಿಗೂ ಅದು ಪ್ರಸ್ತುತ. ಹೀಗಾಗಿ ಕೃಷ್ಣಕಾಂತ್‌ರವರ ವಿಚಾರಧಾರೆಯನ್ನು ನಾವು ಅನುಕರಣೆ ಮಾಡುವಂತಾದ್ದು ಆಗ ಬೇಕಾಗಿದೆ ಎನ್ನುವುದನ್ನು ನಾನು ಹೇಳಬಯಿಸಿ ಇವತ್ತು ಒಬ್ಬ ಸಜ್ಜನ, ಸ್ವಾತಂತ್ರ ಹೋರಾಟಗಾರ ಹಾಗೂ ರಾಜಕೀಯದಲ್ಲಿದ್ದು ಒಂದು ಒಳ್ಳೆಯ ಹೆಸರನ್ನು ಪಡೆದುಕೊಂಡಂತಹ ಮಾನ್ಯ ಕೃಷ್ಣಕಾಂತರ ಆದರ್ಶ ನಮ್ಮೆಲ್ಲರಿಗೂ ಒಂದು ಆದರ್ಶಪ್ರಾಯವಾಗಬೇಕಾಗಿದೆ. ಮಾನ್ಯ ಕೃಷ್ಣಕಾಂತ್ ನಮ್ಮ ಜೊತೆ ಇಲ್ಲ. ನಮ್ಮನ್ನು ಅಗಲಿ ಹೋಗಿದ್ದಾರೆ. ಜೀವನ ಹೇಗೆ ಇರುತ್ತದೆಂದರೆ ಮಾನ್ಯ ಅಬ್ದುಲ್ ಕಲಾಂ ಅವರ ಪ್ರಮಾಣವಚನ ಸ್ವೀಕಾರಸಮಾರಂಭದಲ್ಲಿ ಭಾಗವಹಿಸಿ ಹಿಂದಿನ ರಾಷ್ಟ್ರಪತಿಗಳಾದ ನಾರಾಯಣನ್‌ರವರ ಕೊನೆಯ ಭಾಷಣವನ್ನು ಭಾಷಾಂತರ ಮಾಡಿ ಓದಿ ಹೇಳಿವಂತಾದ್ದು ಇವತ್ತಿನವರೆಗೂನಮ್ಮ ಮನಸ್ಸಿನ ಮುಂದೆ ಇದೆ. ನಿನ್ನೆ ಇದ್ದವರು ಇವತ್ತು ಇಲ್ಲ ಯಾವುದೇ ಒಂದು ಅನಾರೋಗ್ಯದಿಂದ ಅವರು ಬಳಲಲಿಲ್ಲ. ಆರೋಗ್ಯವಂತರಾಗಿಯೇ ಇದ್ದರು.

ಒಂದು ಕ್ಷಣದಲ್ಲಿ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಜೀವನವು ಯಾವರೀತಿಯಲ್ಲಿ ಕ್ಷಣಿಕ ಎನ್ನುವಂತಾದ್ದು ಏನಿದೆ, ಯಾವುದೇ ಕ್ಷಣದಲ್ಲಿ ಏನಾದರೂ ಆಗಬಹುದು ಎನ್ನುವಂತಾದ್ದುನ್ನು ನಾವು ಇದರಿಂದ ತಿಳಿದುಕೊಳ್ಳಬೇಕಾಗಿದೆ ನಿಜ. ಆದರೂ ಅವರು ತಮ್ಮ ಜೀವನ ಪರ್ಯಂತ ಆದರ್ಶ ರಾಜಕಾರಣವನ್ನು ಮಾಡಿದರು. ಬಹುಶಃ ನಾವು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಣೆ ಮಾಡುವಂತಾದ್ದರೆ ಅವರ ಏನೊಂದು ಆದರ್ಶ ಮಾರ್ಗ ಇತ್ತು ಅದನ್ನು ಅನುಕರಣೆ ಮಾಡಿದಾಗ ಮಾತ್ರ ನಾವು ಅವರ ಆದರ್ಶಗಳನ್ನು ಪಾಲನೆ ಮಾಡಿದ ಹಾಗೆ ಆಗುತ್ತದೆ. ಅದರ ಮೂಲಕ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಕೃಷ್ಣಕಾಂತ್‌ರವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬ ವರ್ಗಕ್ಕೆ ಅವರ ಅಗಲುವಿಕೆಯಿಂದ ಏನೊಂದು ಅಧೈರ್ಯವಾಗಿದೆ ಆ ಒಂದು ಧೈರ್ಯವನ್ನು ತುಂಬುವಂಥ ಕೆಲಸ ಆಗಲಿ, ಅದಕ್ಕಾಗಿ ನಾನು ದೇವರಲ್ಲಿ ಪ್ರಾರ್ಥನೆಯನ್ನು ಮಾಡಿ ತಾವುಗಳು ಮಂಡಿಸಿದ ಸಂತಾಪ ಸೂಚನೆಯನ್ನು ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಷ್ಟ್ರದ ಉಪ-ರಾಷ್ಟ್ರಪತಿ ಆಗಿ ಕೇವಲ 24 ದಿನಗಳು ಇರುವವರೆಗೆ ನಮ್ಮೊಡನೆ ಇದ್ದು ಈಗ ನಮ್ಮಿಂದ ಅಗಲಿ ದೂರವಾಗಿದ್ದಾರೆ. ಕೃಷ್ಣಕಾಂತ್‌ರವರು ಉತ್ತಮ ಆದರ್ಶಗಳನ್ನು ಇಟ್ಟುಕೊಂಡು ಬಂದಂಥ ವ್ಯಕ್ತಿ. ಅವರು ತಮ್ಮ ಜೀವನದ ಉದ್ದಕ್ಕೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳವಡಿಸಿಕೊಂಡು ಅವುಗಳನ್ನು ಪ್ರತಿಪಾದನೆ ಮಾಡಿ ಬಂದಂಥ ವ್ಯಕ್ತಿಗಳು. ಅವರು ಸಜ್ಜನಿಕೆಯ ಸುಸಂಸ್ಕೃತ ವ್ಯಕ್ತಿ. ಈ ಯಂಗ್ ಟರ್ಕ್ಸ್ ಎಂದು ನಾಲ್ಕು ಜನರೆನಿದ್ದರು ಅವರುಗಳು ಇಡೀ ರಾಷ್ಟ್ರದ ಗಮನವನ್ನು

ಸೆಳೆದಿದ್ದಂಥವರು. ಅದು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಆವಾಗ ಇವರೂ ಸಹ ಮುಂಚೂಣಿಯಲ್ಲಿದ್ದರು. ನನ್ನ ಒಂದು ಸಣ್ಣ ಅನುಭವದ ನನಗೆ ಜ್ಞಾಪಕಕ್ಕೆ ಬರುತ್ತದೆ. 3-4 ತಿಂಗಳುಗಳ ಹಿಂದೆ ದೆಹಲಿಗೆ ನಮ್ಮ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಅಧ್ಯಯನ ಪ್ರವಾಸವನ್ನು ಕೈಗೊಂಡಿದ್ದ ಸಮಯ. ಆವಾಗ ನಮಗೆ ಉಪ ರಾಷ್ಟ್ರಪತಿಯವರನ್ನು ಭೇಟಿ ಮಾಡತಕ್ಕಂಥ ಅವಕಾಶವು ನಮಗೆ ಸಿಕ್ಕಿತು. ಭೇಟಿ ಮಾಡಿದಾಗ ನಮ್ಮ ರಾಷ್ಟ್ರದ ಚುನಾವಣಾ ಪದ್ಧತಿ, ಅಪರಾಧೀಕರಣ, ಭ್ರಷ್ಟಾಚಾರ, ಮುಂತಾದ ಎಲ್ಲಾ ವಿಚಾರಗಳ ಬಗ್ಗೆ ನಾವು ಮಾತನ್ನು ಪ್ರಾರಂಭ ಮಾಡಿದೆವು. ಅವರು ಬಹಳ ಸಂತೋಷದಿಂದ ಚರ್ಚೆ ಪ್ರಾರಂಭ ಮಾಡಿದರು. ಈ ಒಂದು ವ್ಯವಸ್ಥೆಯು ಸರಿ ಹೋಗ ಬೇಕಾದರೆ ನನಗಂತೂ ನಂಬಿಕೆ ಹೊರಟು ಹೋಗಿದೆ ಈ ಮೌಲ್ಯಗಳು ಕುಸಿಯುತ್ತಾ ಇವೆ, ರಾಜಕಾರಣದಲ್ಲಿ ಭ್ರಷ್ಟಾಚಾರ, ಅಪರಾಧಿಕರಣ, ಜಾತೀಯತೆ, ತಾಂಡವವಾಡುತ್ತಾ ಇದೆ, ಇದಕ್ಕೆ ಏನಾದರೂ ಮಾಡಬೇಕಲ್ಲಾ ಎಂದು ನಾನು ಹೇಳಿದಾಗ, ಅವರು ನಮಗೆ ಸಮಾಧಾನ ಹೇಳಿದರು.

Mr. Youngman, don't be disheratened. Our country will have a future. I am very much confident about it. Be assured.

ಎಂದು ಹೇಳಿದರು. ಅದಕ್ಕೆ ಒಂದು ಉದಾಹರಣೆಯನ್ನೂ ಕೂಡ ಕೊಟ್ಟರು. ಏಕೆಂದರೆ ಅವರು ಸೆಕೆಂಡ್ ಜನರೇಷನ್‌ನಿಂದ ಬಂದವರು. ಅವರ ತಂದೆಯವರೂ ಸಹ ಆ ಕಾಲದಲ್ಲೇ ಅಂದರೆ ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯ ಹೋರಾಟ ಮಾಡಿ ಒಳ್ಳೆಯ ಕುಟುಂಬದಿಂದ ಬಂದವರು. 1952ರಲ್ಲಿ ಅವರ ತಂದೆಯವರು ಚುನಾವಣೆಗೆ ನಿಂತಾಗ, ಆ ಚುನಾವಣೆಯಾದ ಮೇಲೆ ಲೆಕ್ಕಪತ್ರವನ್ನು ಕೊಡಬೇಕಾಗಿತ್ತು. ಆಗ 50 ರೂ.ಗಳ ಒಂದು ಪ್ರಿಂಟಿಂಗ್‌ನ ಪ್ರೆಸ್‌ನ ಲೆಕ್ಕ ಸಿಗಲಿಲ್ಲವಂತೆ. ಅದು ಸಿಗದಿರುವಾಗ ಕೆಲವರು ಬೇರೆ ಒಂದು ಸಲಹೆ ಮಾಡಿದರಂತೆ. ಅದಕ್ಕೆ ಬೇರೆ ಏನಾದರೂ ಲೆಕ್ಕ ಮಾಡಿಕೊಳ್ಳಬಹುದು, ಇಲ್ಲವಾದರೆ ಅದರ ರಸೀತಿಯನ್ನು ದೆಹಲಿಗೆ ಹೋಗಿ ತಂದು ಕೊಡಬೇಕಾಗುತ್ತದೆ ಎಂದು ಹೇಳಿದಾಗ ಅವರು ಅದಕ್ಕೆ ಏನು ಹೇಳಿದರಂತೆ ದೆಹಲಿಗೆ ಹೋಗಿ ಬರಲು 200 ರೂ.ಗಳ ಖರ್ಚಾಗುತ್ತದೆ, ನಾಳೆಯೇ ಕೊನೆಯ ದಿನ ಅದನ್ನು ಹೇಗಾದರೂ ಮಾಡಿಕೊಡಬೇಕೆಂದಾಗ ಅವರು 50 ರೂ.ಗಳ ಲೆಕ್ಕ ಕೊಡುವಲ್ಲಿ ನಾನು ಸುಳ್ಳು ಲೆಕ್ಕ ಕೊಡುವುದಿಲ್ಲ, ಅದಕ್ಕೆ 200 ರೂ.ಗಳ ಖರ್ಚಾದರೂ ಚಿಂತೆಯಿಲ್ಲ ಸತ್ಯವನ್ನು ನಾವು ಹುಡುಕಬೇಕಾದರೆ ಹಣ ಎಷ್ಟು ಖರ್ಚಾದರೂ ಚಿಂತೆಯಿಲ್ಲ ದೆಹಲಿ ಇಂದ ತರಿಸಲೇ ಬೇಕು ಎಂದು ರಾತ್ರಿಯೇ ದೆಹಲಿಗೆ ಕಳುಹಿಸಿ ಅದನ್ನು ಅಲ್ಲಿಂದ ವಾಪಸ್ಸು ತಂದು ಆ ಒಂದು ರಸೀತಿಯನ್ನು ಸೇರಿಸಿ ಲೆಕ್ಕವನ್ನು ಕೊಟ್ಟರಂತೆ. ಅಂಥ ಒಂದು ಪದ್ಧತಿ ಮತ್ತು ಪ್ರಾಮಾಣಿಕತೆ ಆ ಕಾಲದಲ್ಲಿ ಇತ್ತು. ಒಂದು ಆ ಮೇಲೆ ಇಂಥ ಚರ್ಚೆ ಮಾಡುವಾಗ ನಾನು ಸಾಮಾನ್ಯವಾಗಿ 5-10 ನಿಮಿಷಗಳ ಕಾಲ ಕಳೆಯುತ್ತೇನೆ, ನೀವುಗಳೆಲ್ಲರೂ ಒಳ್ಳೆಯ ವಿಚಾರವನ್ನು ಚರ್ಚೆಗೆ ಎತ್ತಿಕೊಂಡಾಗ ನನಗೂ ಬಹಳ ಸಂತೋಷವಾಯಿತು. ನಿಮಗೆಲ್ಲಾ ಈ ರಾಷ್ಟ್ರದ ಬಗ್ಗೆ ಕಳಕಳಿ ಇದೆಯನ್ನುವುದು ಗೊತ್ತಾಯಿತು, ಆದ್ದರಿಂದ ನಿಮ್ಮೊಂದಿಗೆ ಅರ್ಧ ಗಂಟೆಯ ಕಾಲ ಮಾತನಾಡಿದ್ದೇನೆ. ಎಲ್ಲರಿಗೂ ಒಳ್ಳೆಯದಾಗಲಿ ಎಂದು ನಮ್ಮನ್ನು ಬೀಳ್ಕೊಟ್ಟರು. ಬಿಳ್ಕೊಡುವಾಗ ಅವರು ನನ್ನನ್ನು ಪಕ್ಕದಲ್ಲಿ ಕರೆಸಿ Youngman come and stand besides me. We will take photograph.

ಎಂದು ಫೋಟೋ ತೆಗೆಸಿಕೊಂಡರು. ಅಷ್ಟೊಂದು ಅಭಿಮಾನದಿಂದ ನಮ್ಮನ್ನು ಕಂಡರು. ನನಗೆ ಬಹಳ ಸಂತೋಷವಾಯಿತು. ಬಹುಶಃ ಅವರು ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದರೆ ಈ ಒಂದು ಅಕಾಲಿಕ ಮರಣವಾಗುತ್ತಿರಲಿಲ್ಲವೆಂದು ನಾನಾದರೂ ಅಂದುಕೊಂಡಿದ್ದೇನೆ. ಆ ಒಂದು ನಿರಾಶೆಯ ಆಘಾತವಾಗಿರಬಹುದು ಎಂದು ನನಗನ್ನಿಸುತ್ತದೆ. ಏಕೆಂದರೆ ಕೆಲವೇ ಕೆಲವು ಉಪರಾಷ್ಟ್ರಪತಿಗಳು ರಾಷ್ಟ್ರಪತಿಯಾಗಿಲ್ಲವೆನ್ನುವವರಲ್ಲಿ ಇವರೂ ಒಬ್ಬರು. ಇನ್ನೇನು ಅವರೇ ಒಪ್ಪಿಕೊಳ್ಳಬೇಕೆನ್ನುವ ಸನ್ನಿವೇಶದಲ್ಲಿ ಹೇಗೋ ಕೈತಪ್ಪಿ ಹೋಯಿತು. ಆದರಿಂದ ಅವರ ಮನಸ್ಸಿನ ಮೇಲೆ ಪರಿಣಾಮ ಬೀರಿದೆ; ಹಾಗಾಗಿ ಹೃದಯಾಘಾತವಾಗಿದ್ದರ ಇರಬಹುದು. ಈ ಚುನಾವಣಾ ಪದ್ಧತಿಯ ಸುಧಾರಣೆಯಾಗಬೇಕೆಂದು ಅವರು ಆಸೆ ಪಟ್ಟಿದ್ದರು. ರಾಷ್ಟ್ರದಲ್ಲಿ ಒಳ್ಳೆಯ ವ್ಯವಸ್ಥೆ ಬರಬೇಕು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾವು ರಕ್ಷಣೆ ಮಾಡಬೇಕೆಂದು ಅವರು ಆಸೆ ಪಟ್ಟಿದ್ದರು. ಅದು ಆಗಬೇಕಾದರೆ ನಾವು ಎಲ್ಲಾ ರಾಷ್ಟ್ರೀಯ ಪಕ್ಷಗಳವರು ಮುಂದಾಗಬೇಕು. ಇವೊತ್ತು ಸಾರ್ವಜನಿಕರು ನಮ್ಮನ್ನು ಗೇಲಿ ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ನಾವು ನೋಡುತ್ತಾ ಇದ್ದೇವೆ. ಪತ್ರಿಕೆಗಳಲ್ಲಿ ಶ್ರೇಷ್ಠ ನ್ಯಾಯಾಲಯ ಕೊಟ್ಟಂಥ ನಿರ್ದೇಶನವನ್ನು ನಾಚಿಕೆ ಇಲ್ಲದೆ ರಾಜಕೀಯ ಪಕ್ಷಗಳೆಲ್ಲವೂ ಒಂದಾಗಿ ತಡೆಹಿಡಿಯಲು, ಕತ್ತು ಹಿಸಕಲು ಪ್ರಯತ್ನಿಸುತ್ತಿದ್ದಾರಲ್ಲಾ ಎನ್ನುವ ಒಂದು ಭಾವನೆ ರಾಷ್ಟ್ರದಾದ್ಯಂತ ಬಂದಿದೆ. ಅದನ್ನು ಹೋಗಲಾಡಿಸಬೇಕಾದರೆ ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ, ಈ ಚುನಾವಣಾ ಪದ್ಧತಿಯು ಸುಧಾರಣೆಯಾಗ ಬೇಕಾದರೆ, ಒಳ್ಳೆಯ ಪ್ರಾಮಾಣಿಕರು, ಒಳ್ಳೆಯ ಜನರು ಸಾರ್ವಜನಿಕ ಜೀವನಕ್ಕೆ ಬರಬೇಕಾದರೆ ಖಂಡಿತವಾಗಿ ಅವರು ಕೊಟ್ಟಂಥ ನಿರ್ದೇಶನವನ್ನು ಪಾಲನೆ ಮಾಡಲೇ ಬೇಕು. ಅದರ ಮೂಲಕ ಮಾನ್ಯ ಕೃಷ್ಣಕಾಂತ್‌ರವರಿಗೆ ಶ್ರದ್ಧಾಂಜಲಿ ಸಲ್ಲಿಸಬಹುದಾಗಿದೆ. ಸುಪ್ರೀಂಕೋರ್ಟ್‌ನವರು ಅಭ್ಯರ್ಥಿಗಳ ಅಪರಾಧಿ ಹಿನ್ನಲೆಯನ್ನು ನಾಮಿನೇಷನ್ ಪತ್ರಿಕೆಗಳಲ್ಲಿ ಹಾಕಬೇಕು, ಚುನಾವಣೆಯಲ್ಲಿ ನಿಲ್ಲತಕ್ಕಂಥ ವ್ಯಕ್ತಿಗಳ ಹಿನ್ನಲೆ ಮತದಾರರಿಗೆ ಗೊತ್ತಾಗ ಬೇಕು. ಮತ್ತು ಎಷ್ಟು ಹಣ ಖರ್ಚಾಗಿದೆ ಹಾಗೂ ಎಲ್ಲೆಲ್ಲಿಂದ ಹಣ ಶೇಖರಣೆ ಮಾಡುತ್ತಾರೆ, ಅಭ್ಯರ್ಥಿಯ ಆಸ್ತಿಪಾಸ್ತಿಗಳು ಮತ್ತು ಅವರ ಸಂಬಂಧಿಕರ ಆಸ್ತಿಗಳು ಏನೇನಿವೆ, ಅದನ್ನು ಜನರಿಗೆ ತೋರಿಸಬೇಕೆಂದು ಏನಿದೆ ಅದನ್ನು ನಾವೆಲ್ಲರೂ ಒಪ್ಪಿಕೊಳ್ಳತಕ್ಕಾಂಥಾದ್ದು ಇರುವುದರಿಂದ ಅದೇ ಅವರಿಗೆ ಸಲ್ಲಿಸತಕ್ಕಂಥ ಶ್ರದ್ಧಾಂಜಲಿ ಎಂದು ಹೇಳುತ್ತಾ ಅವರ ಕುಟುಂಬದವರಿಗೆ ಭಗವಂತ ದುಃಖ ಭರಿಸಿಕೊಳ್ಳತಕ್ಕಂಥ ಶಕ್ತಿಯನ್ನು ಕೊಡಲಿ, ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಹೇಳಿ ತಾವುಗಳು ಮಂಡಿಸಿರತಕ್ಕಂಥ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಸನ್ಮಾನ್ಯ ಅಧ್ಯಕ್ಷರೇ, ಉಪ-ರಾಷ್ಟ್ರಪತಿ ಶ್ರೀ ಕೃಷ್ಣಕಾಂತ್‌ರವರ ನಿಧನದ ವಿಷಯವನ್ನು ತಾವು ಸಭೆಯಲ್ಲಿ ಮಂಡಿಸಿರುವುದನ್ನು ನಾನು ಬೆಂಬಲಿಸಿ ಈ ರಾಷ್ಟ್ರದಲ್ಲಿ ಉಪರಾಷ್ಟ್ರಪತಿಯಾಗಿ, ತನ್ನ 72 ವರ್ಷ ವಯಸ್ಸಿನ ಅನುಭವ ನೀಡಿದ ಅವರು ಇವೊತ್ತು ಇಲ್ಲ. ಮನುಷ್ಯನಿಗೆ ಹುಟ್ಟು ಸ್ವಾಭಾವಿಕ ಮತ್ತು ನಾವು ನಿಶ್ಚಯ. ಹುಟ್ಟುಸಾವುಗಳ ಮಧ್ಯೆ ಮಾನವೀಯ ಮೌಲ್ಯಗಳನ್ನು ರೂಪಿಸಿಕೊಳ್ಳುವಂಥ ವ್ಯಕ್ತಿ ರಾಷ್ಟ್ರದ ಉನ್ನತ ಸ್ಥಾನಕ್ಕೆ ಏರುತ್ತಾರೆ ಮತ್ತು ಅಲ್ಲಿ ತಮ್ಮದೇ ಆದ ಸಾಧನೆಯನ್ನು ಮಾಡಿ ತೋರಿಸುತ್ತಾರೆ ಎನ್ನುವುದಕ್ಕೆ ನಮ್ಮ ಉಪರಾಷ್ಟ್ರಪತಿಯವರಾಗಿದ್ದಂಥವರೇ ಉದಾಹರಣೆ. ಅವರು ಈಗ ನಮ್ಮ

ಮುಂದೆ ಇಲ್ಲ. ಈಗಾಗಲೇ ಅವರ ಜೀವನ ಚರಿತ್ರೆಯನ್ನು ನಾವು ನೋಡಿದಂಥ ಸಂದರ್ಭದಲ್ಲಿ ಅವರು ಮಾನವೀಯ ಮೌಲ್ಯಗಳಿಗೆ ಬೆಲೆ ಕೊಟ್ಟಿರುವುದನ್ನು ಖಚಿತ ಮಾಡಿಕೊಂಡಿದ್ದೇವೆ. ಸನ್ಮಾನ್ಯ ಸೋಮಶೇಖರ್‌ರವರು ಹೇಳಿದ ಹಾಗೆ ಹಣದ ಮೊತ್ತ ಕಡಿಮೆಯಾಗಿದ್ದರೂ ಕೂಡ ಅದರಲ್ಲಿ ಏನಾದರೂ ನಾನು ತಪ್ಪು ಮಾಡಿದರೆ ಅಥವಾ ಲೆಕ್ಕವನ್ನು ಕೊಡದಿದ್ದರೆ ತಪ್ಪಿಗೆ ಒಳಗಾಗ ಬಹುದು ಹಣಕ್ಕೆ ಮಾನ್ಯತೆ ಕೊಡಬಾರದು, ಖರ್ಚಿಗೆ ಮಾನ್ಯತೆಯನ್ನು ಕೊಡಬಾರದು, ಮೌಲ್ಯಗಳಿಗೆ ಮಾನ್ಯತೆಯನ್ನು ಕೊಡಬೇಕೆಂದು ಅಂಥ ವ್ಯಕ್ತಿತ್ವವನ್ನು ಅವರು ರೂಢಿಸಿಕೊಂಡಿದ್ದವರು. ಉಪರಾಷ್ಟ್ರಪತಿಯಾಗಿ ರಾಜ್ಯಸಭೆಯ ಸಭಾಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸುವಂಥ ಸಂದರ್ಭದಲ್ಲಿ ಅವರು ತೆಗೆದುಕೊಳ್ಳುತ್ತಿದ್ದಂಥ ನಿರ್ಣಯಗಳು, ಆ ಸಭೆಯಲ್ಲಿ ನೀಡಿದಂಥ ಆದೇಶಗಳು, ಅವರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತಾ ಇತ್ತು ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡಬೇಕಾಗುತ್ತದೆ.

10.50 ಎ.ಎಂ.

ನಿನ್ನೆ ಅವರ ಶವದ ಹತ್ತಿರ 87 ವರ್ಷದ ಅವರ ಮಾತೃಶ್ರೀಯವರು ಪಡುತ್ತಿದ್ದ ವೇದನೆಯನ್ನು ನೋಡಿದರೆ ಕೃಷ್ಣಕಾಂತರಿಗೆ 72 ವರ್ಷ ತುಂಬಿದ್ದರೂ ಕೂಡ ಮಾತೃಹೃದಯದಲ್ಲಿ ಮಗ ಎಂದು ದುಃಖ ವ್ಯಕ್ತಪಡಿಸುತ್ತಿದ್ದರು. ಅವರ ಆತ್ಮಕ್ಕೆ ಚಿರಶಾಂತಿ ಸಿಕ್ಕಲಿ, ಅವರ ಕುಟುಂಬವರ್ಗದವರಿಗೆ ಆ ದುಃಖ ಸಹಿಸುವ ಶಕ್ತಿ ಕೊಡಲಿ ಎಂದು, ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಅಧ್ಯಕ್ಷರೇ ಈ ಸಂತಾಪಸೂಚಕ ವಿಷಯದಲ್ಲಿ ನಾನು ಮಾತನಾಡುವ ಅವಶ್ಯಕತೆ ಇಲ್ಲ. ನನ್ನ ನಾಯಕರು ಈಗಾಗಲೇ ಮಾತನಾಡಿದ್ದಾರೆ. ಆದರೆ ಆ ವ್ಯಕ್ತಿ ಬದುಕಿದಂಥ ಮೌಲ್ಯಗಳ ಬಗ್ಗೆ ತಿಳಿದುಕೊಂಡಿದ್ದು ಓದಿದ್ದು ಅವರ ಸ್ನೇಹಿತರಿಂದ ತಿಳಿದಿದ್ದು ನೋಡಿ ಒಂದೆರಡು ಒಳ್ಳೆಯ ಮಾತನ್ನಾಡಬೇಕೆಂದು ನನ್ನ ಮನಸ್ಸು ಉತ್ಸಾಹದಿಂದ ನಿಂತಿದ್ದೇನೆಯೇ ಹೊರತು ಬೇರೆ ಏನಿಲ್ಲ. ಇವರ ವಿಚಾರಗಳನ್ನು ನಾನು ಲಾ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಪತ್ರಿಕೆಯಲ್ಲಿ ಯಂಗ್‌ಟರ್ಕ್ ಎಂದು ಬರುತ್ತಿತ್ತು. ಒಂದು ಗುಂಪಿತ್ತು. ಆಗಲೇ ಇವರ ಬಗ್ಗೆ ನಾನು ತಿಳಿದುಕೊಳ್ಳಲು ಸಹಾಯಕವಾಯಿತು. ಆಗ ಯಂಗ್‌ಟರ್ಕ್ ಎಂಬ ತಮಗೆಲ್ಲಾ ಗೊತ್ತಿರುವಂತೆ ರಾಮಧುನ್‌ರವರು ಮೋಹನ್‌ಧಾರಿಯಾರವರು, ಒಬ್ಬ ಲೇಡಿ ಇದ್ದರು ಲಕ್ಷ್ಮೀಕಾಂತಮ್ಮ ಅಂತ, ಆಂಧ್ರದವರು. ಆಮೇಲೆ ಚಂದ್ರಶೇಖರ್ ಇಷ್ಟು ಜನ ಸೇರಿ ಆ ದಿನಕ್ಕೆ ಕಾಂಗ್ರೆಸ್ ಎಂದರೆ ಯಾರೂ ಮಾತನಾಡಲು ರೆಡಿ ಇರಲಿಲ್ಲ. ಅದರ ವಿರುದ್ಧದ ತತ್ವಗಳನ್ನೂ ಹೇಳಲು ಸಿದ್ದರಿರಲಿಲ್ಲ. ಅಂತಹ ಉಚ್ಚಾಭ್ರಾಯ ಸ್ಥಿತಿಯಲ್ಲಿದ್ದ ಕಾಂಗ್ರೆಸ್‌ನಲ್ಲಿ ಇವರೆಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನೆಹರೂರವರನ್ನು ಜಗ್ಗಿಸಿ ಕೇಳುವಂತಹ ಯಂಗ್‌ಟರ್ಕ್ಸ್ ಅಂದರೆ ಇವರೇ ಆಗಿದ್ದರು. ಕಾಂಗ್ರೆಸ್ ಏನು ತಪ್ಪು ಮಾಡಿತ್ತು ಅದನ್ನು ಎದೆಗಾರಿಕೆಯಿಂದ ಕೇಳುವಂತಹ ಶಕ್ತಿಇವರಿಗಿದ್ದುದ್ದನ್ನು ನೋಡಿ ಬಹಳಸಲ ಮೆಚ್ಚಿದ್ದೇನೆ. ಆ ಒಂದು ಗತ್ತುಗಾರಿಕೆ, ನಡತೆ ಆಗ ಇಂಥವರೂ ಇದ್ದರಲ್ಲಾ ಎಂದು ನನಗಾದರೂ ಇದು ನಿಜವೋ ಸುಳ್ಳೇ ಎಂದು ಇವತ್ತು ನೋಡಬೇಕಾಗುತ್ತದೆ. ಅವತ್ತು ನೆಹರೂ ವಿರುದ್ಧ

ಮಾತನಾಡುವವರಾಗಲಿ ಕ್ವೊಶ್ಚನ್ ಮಾಡುವವರಾಗಲಿ ಬಹುಶಃ ಯಾರೂ ಇರಲಿಲ್ಲ. The whole nation was congress the nation was behind him the entire country was behind him. That being the case ಇದು ಸತ್ಯ ಇದು ಅಸತ್ಯ, ಇದು ನ್ಯಾಯ ಇದು ಅನ್ಯಾಯ ಎಂದು ಹೇಳುವಂತಹ ಪರಿಪಾಠವನ್ನು ಈ ಐದುನಾಯಕರು ಏನು ಪರಿಪಾಠ ಇಟ್ಟುಕೊಂಡಿದ್ದರು ಇವರು ಅವತ್ತಿಗೇ ಅಧಿಕಾರಕ್ಕಾಗಿ ಆಸೆಪಟ್ಟಿದ್ದರೆ ಏನೇನೋ ಆಗ ಬಹುದಿತ್ತು. ಆದರೆ ಈ ಇಳಿವಯಸಿನಲ್ಲಿ ಉಪರಾಷ್ಟ್ರಪತಿಯಾದರೂ, ಅಲ್ಲೆಲ್ಲೋ ರಾಜ್ಯಪಾಲರಾದರು. ಇದೆಲ್ಲಾ ಅವರಿಗೆ ಬಹಳ ಕಷ್ಟವಾಗುತ್ತಿರಲಿಲ್ಲ, ಅವತ್ತಿಗೇ ಕಾಂಪ್ರಮೈಸ್ ಮಾಡಿಕೊಂಡಿದ್ದರೆ ಎಲ್ಲಾ ಅನುಭವಿಸಬಹುದಿತ್ತು. ಇಂತಹ ವಿಶೇಷ ನಾಯಕತ್ವ ಗುಣ ಅವರಲ್ಲಿತ್ತು. ನಾವು ಇಂತಹ ವಿಶೇಷ ನಾಯಕತ್ವಗುಣದ ಜನ ಈ ದೇಶದಲ್ಲಿದ್ದರಾ ಎಂದು ಅನೇಕ ಕಾಲ್ಪನಿಕವಾಗಿ ಮಾತನಾಡುತ್ತೇವೆ. ವಿಚಾರಗಳನ್ನು ಆದರೆ ಇವರು ವಾಸ್ತವಿಕವಾಗಿ ಬದುಕಿದಂತಹ ಜನ. ಅದರಲ್ಲೂ ಕೃಷ್ಣಕಾಂತ್, ಚಂದ್ರಶೇಖರ್ ಇವರೆಲ್ಲಾ ಫುಲ್ ಫೈಟರ್ಸ್ ಆಗಿ ಸೋಷಿಯಲಿಸ್ಟ್ ಫೋರಂ ಎಂದು ಕಾಂಗ್ರೆಸ್ ಒಳಗೇ ಕಟ್ಟಿಕೊಂಡು ಹಳೇ ಜನರೇಶನ್ ಏನಿತ್ತು ಎಸ್‌ಕೆ ಪಾಟೀಲ್ ಮುರಾರ್ಜಿ ದೇಸಾಯಿ ಇವರುಗಳ ವಿರುದ್ಧವೇ ನಿಂತುಕೊಳ್ಳುವಂತಹ ವ್ಯಕ್ತಿತ್ವ; ಆ confidence, stregth of willpower ಅದನ್ನು one should appreciate ಎನ್ನುವುದನ್ನು ನಾನು ಇವರಲ್ಲಿ ಕಾಣುತ್ತೇನೆ. ಆ ದೊಡ್ಡ ಗುಣವೇ ನನಗೆ ಈವತ್ತು ಸ್ಫೂರ್ತಿಯಾಗಿ ಅವರ ಬಗ್ಗೆ ಒಂದು ವಿಚಾರ ಹೇಳಬೇಕೆಂದು ಅನ್ನಿಸಿತು. ಇವತ್ತು ನಾವೆಲ್ಲಾ ಏನು ಪಬ್ಲಿಕ್‌ಲೈಫ್‌ನಲ್ಲಿದ್ದೇವೆ, ಬಹಳಷ್ಟು ಜನ ಇವರನ್ನು ಕಂಪೇರ್ ಮಾಡಿದಾಗ ನಾವೆಲ್ಲಿ ಅವರೆಲ್ಲಿ? ಅವರು ಆಕಾಶದಲ್ಲಿ ನಾವು ಭೂಮಿಯಲ್ಲಿದ್ದೇವೆಂಬ ಪರಿಸ್ಥಿತಿ ಇವತ್ತು ಬಂದುಬಿಟ್ಟಿದೆ. ಅಂತಹ ಒಂದು ದೊಡ್ಡ ಗುಣಾತ್ಮಕ ಬದುಕನ್ನು ಬದುಕಿದ ಶ್ರೀಮಾನ್ ಕೃಷ್ಣಕಾಂತರನ್ನು ಈ ಸಂದರ್ಭದಲ್ಲಿ ಸದನ ನೆನೆಯುತ್ತಿದೆ. ನಾನಾದರೂ ನನ್ನ ಮೆಚ್ಚಿನ ನಾಯಕರಾದ ಶ್ರೀಮಾನ್ ಕೃಷ್ಣರವರನ್ನು ಪ್ರಾರ್ಥಿಸುತ್ತೇನೆ. ಮೊನ್ನೆ ತಾವು 5 ಪುಸ್ತಕಗಳನ್ನು ರಿಲೀಸ್ ಮಾಡಿದಿರಿ, ಒಳ್ಳೆಯ ಪಾರ್ಲಿಮೆಂಟೇರಿಯನ್‌ಗಳ ಪುಸ್ತಕಗಳನ್ನು ರಿಲೀಸ್ ಮಾಡಿದಿರಿ. ಅವಕಾಶ ಬಂದಾಗ ಇವರ ಬಗ್ಗೆಯೂ ಪುಸ್ತಕ ಪ್ರಕಟಿಸುವುದು ಯೋಗ್ಯ and it deserved to be published ಆದರಲ್ಲಿ ಎರಡು ಮಾತಿಲ್ಲ. ಅಧ್ಯಕ್ಷರೇ, ಯಂಗ್‌ಟರ್ಕ್ಸ್‌ಗೆ ಅವತ್ತಿನಕಾಲದಲ್ಲಿ ನಮ್ಮ ಪ್ರೆಸ್‌ಬಂಧುಗಳು ಬರೆಯುತ್ತಿದ್ದುದ್ದು ಏನೆಂದರೆ ಇವರೆಲ್ಲಾ ಚೋಟು ಮೆಣಸಿನಕಾಯಿಗಳು ಅಂತ. ಇವರು ಚುರುಕು ಮುಟ್ಟಿಸುತ್ತಿದ್ದರು ಅವಾಗವಾಗ. ಏನಾದರೂ ಪಾಲಿಸಿ ತಪ್ಪಾಯ್ತು ಅಂದರೆ ಎದ್ದುಬಿಡೋರು, ಅಂತಹ ಚುರುಕುಮೆಣಸಿನಕಾಯಿಗಳನ್ನು ನಾವು ಈವತ್ತು ನೆನಸಿಕೊಳ್ಳುವುದು ಬಹಳ ಮುಖ್ಯವೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅವರ ಹೋಲ್ ಬೆಟಾಲಿಯನ್ ಆರು ಮಂದಿ ಹಾಗೇ ಇದ್ದರು. They never compromised for anything ಹಣಕ್ಕೂ ಇಲ್ಲ. ಮಸಲ್‌ಪವರ್‌ಗೂ ಇಲ್ಲ ಅಧಿಕಾರಕ್ಕೂ ಇಲ್ಲ ಇನ್ನೊಂದು ವ್ಯಾಮೋಹ-ಏನೂ ಇಲ್ಲದೆ ಕಾಂಪ್ರೊಮೈಸ್ ಮಾಡದೆ ಫೈಟ್ ಮಾಡಿಕೊಂಡೇ ಬಂದರು ಅವರು ಎಷ್ಟು ಜನಕ್ಕಿದೆ ಈ ಕೆಪ್ಯಾಸಿಟಿ ಇವತ್ತು? we compromise for so many things; we adjust to the so many elements ಅದನ್ನು ಮೀರಿ ಇವರು ನಡೆದದ್ದು, ಎಮರ್ಜೆನ್ಸಿಯಲ್ಲಿ ಅವತ್ತು ಇವರು ಕ್ವೊಶ್ಚನ್ ಮಾಡಿದ್ದು ಜೈಲಿಗೆ ಹೋದದ್ದು ಅನುಭವಿಸಿದ್ದು, ಕ್ವಿಟ್ ಇಂಡಿಯಾ ಮೂವ್‌ಮೆಂಟ್‌ನಿಂದ

ನಮಗೆ ಸ್ವಾತಂತ್ರ ್ಯ ತಂದುಕೊಟ್ಟಿದ್ದು ಇದನ್ನೆಲ್ಲಾ ನೋಡಿದರೆ there continue to cherish others for ever, a book has to be published, I request our Hon. Chief Minister through you sir to kindly take to a decision to publish a book on as you have published a few days back in your library committee. ಇನ್ನೊಂದು ಕೊನೇ ಮಾತು. ನಾವೂ ಹುಟ್ಟುತ್ತೇವೆ ಸಾಯುತ್ತೇವೆ ಅದಂತೂ ಕಾಮನ್ ಆದರೆ ಬದುಕಿದ್ದೆಷ್ಟು ದಿನ ಮಾಡಿದ್ದೆಷ್ಟು ದಿನ ಇವತ್ತು ಈ ಮೌಲ್ಯಗಳನ್ನು ಇವತ್ತು ನೋಡುವುದು ಬಹಳ ಕಠಿಣವಾಗಿರುವ ಪರಿಸ್ಥಿತಿಯಲ್ಲಿರುವ ನಮ್ಮ ರಾಜಕಾರಣದಲ್ಲಿ ಇವತ್ತು ಅವರು ನಮಗೆ ಮಾಡೆಲ್‌ಲೀಡರ್ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಅವರ ಆತ್ಮಕ್ಕೆ ನಾನು ಶಾಂತಿ ಕೋರುತ್ತೇನೆ. ಮೊನ್ನೆ ಅಬ್ದುಲ್‌ಕಲಾಂರವರ ಪ್ರಮಾಣವಚನ ಸಂದರ್ಭದಲ್ಲಿ ಟಿವಿಯಲ್ಲಿ ಅವರನ್ನು ನೋಡಿದ್ದು ಅದರ ಬೆಳಿಗ್ಗೆ ಅವರು ಇಲ್ಲ ಎಂದು ಗೊತ್ತಾದದ್ದು ಇನ್ನು 24 ದಿನದಲ್ಲಿ ಅಧಿಕಾರದ ಹೋಗುತ್ತದೆಂಬುದು, ಏನು ಮಾರ್ಮಿಕ ಇದು ಮನುಷ್ಯನ ಜೀವನ next moment ಏನು ಎಂಬುದು ನಮಗೆ ಗೊತ್ತಿಲ್ಲ, ಆದರೂ ಏನೇನೋ ಮಾಡುತ್ತಿರುತ್ತೇವೆ. ಅಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲೂ ಕೂಡ ಅವರ ತಾಯಿ ತನ್ನ ಮಗನನ್ನು ತಬ್ಬಿಕೊಂಡು ಸೀಟಿನಲ್ಲಿಟ್ಟುಕೊಂಡಿದ್ದು ನೋಡಿದರೆ ಅದು ನಿಜಕ್ಕೂ ನನ್ನ ಮನಸ್ಸಿಗೆನಾಟಿತು. ಅಧ್ಯಕ್ಷರೇ, ತಮ್ಮ ಮೂಲಕ ಸಂತಾಪ ಸೂಚನೆಯನ್ನು ಅವರ ಶ್ರೀಮತಿಯವರಿಗೆ ಕುಟುಂಬದವರಿಗೆ ಕಳುಹಿಸಿ ಅವರಿಗೆ ಶಾಂತಿಯನ್ನು ನೀಡಲಿ ಎಂದು ನಾನು ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಅಧ್ಯಕ್ಷರೇ, ಸದಾ ಸಾವಿನಂಚಿನಲ್ಲಿ ಸಾಗುವ ಈ ಜೀವನಕ್ಕೆ ಸಾಧನೆ ಬಹುಮುಖ್ಯ. ನಾವು ಎಷ್ಟು ಕಾಲ ಜೀವಿಸುತ್ತೇವೆ ಎಂಬುದು ಮುಖ್ಯವಲ್ಲ, ಹೇಗೆ ಜೀವಿಸಿದೆವು ಎಂಬುದು ಮುಖ್ಯ. ಬದುಕೊಂದು ಕಂದನವೆಂದಜ್ಜಿ ಬಿಟ್ಟೋಡುವವ ಬೀದಿಯ ಬಾಯಿಗೆ ಕವಳವಾಗದುಳಿವನೆ, ಎದೆಯನುಕ್ಕಾಗಿಸಿದ ಮತಿಗದೆಯ ಪಿಡಿದು ನೀ ಎದುರುನಿಲು ಜೀವಿಯೇ ಮಂಕುತಿಮ್ಮ ಎಂದುಡಿವಿಜಿ ಹೇಳುತ್ತಾರೆ. ಯಮನಿಗೆ ಸಮವರ್ತಿಯೆಂದು ಹೆಸರು, ಅರಸನಾಗಲಿ ಧನಿಕನಾಗಲಿ ತಿರುಕನಾಗಲಿ ನಾನಾಗಲಿ ನೀವಾಗಲಿ ಎಲ್ಲರೂ ಇಲ್ಲಿಂದ ಹೋಗಲೇಬೇಕು, ಹೊಸಬರು ಬರುವುದಾದರೂ ಹೇಗೆ? ಸಾಯುವ ಮುನ್ನ ಸಮಾಜದ ರುಣವ ತೀರಿಸು, ಸಾಯುವ ಮುನ್ನ ಸಮಾಜದ ಸಾಲ ತೀರಿಸು ಎಂಬ ಮಾತಿದೆ. ಮನುಷ್ಯಗೆ ಎರಡು ಸಮಾನಾಂತರ ನಾಮಕರಣಗಳು ಶಿಶು ಮತ್ತು ಶವ ಜನನವೆಂಬ ಮೂರಕ್ಷರದಿ ಜನಿಸಿ ಜೀವನವೆಂಬ ಮೂರಕ್ಷರದಿ ಜೀವಿಸಿ ಮಾನವ ಎಂಬ ಮೂರಕ್ಷರದ ನಿನಗೆ ಮರಣ ಎಂಬ ಮೂರಕ್ಷರ ಬಂದಾಗ ಸಮಾಧಿ ಎಂಬ ಮೂರಕ್ಷರಕ್ಕೆಕೊಡುಗೆ ಎಂಬ ಮೂಲರಕ್ಷರದ ಕೀರ್ತಿಯನ್ನು ಕೊಟ್ಟಾಗ ಆ ಮನುಷ್ಯ ಶಕ್ತಿಯಾಗುವನು. ಆದರೆ ಹುಟ್ಟುತೇನು ತರಲಿಲ್ಲ ಹೋಗುತ್ತೇನೂ ಒಯ್ಯಲಿಲ್ಲ ಸುಟ್ಟುಸುಟ್ಟು ಸುಣ್ಣದರಳಾಯಿತೀದೇಹ ಹೊಟ್ಟೆ ಬಲು ಕೆಟ್ಟದೆಂದು ಎಷ್ಟೋ ಕಷ್ಟಪಟ್ಟುಪ್ರಾಣಬಿಟ್ಟು ಹೋಗುವಾಗ ಗೇಣುಬಟ್ಟೆ ನಿನಗಿಲ್ಲವೋ ಇಂಥ ಅಸ್ಥಿರವಾದ ಮಾನವನ ಬದುಕಿಗೆ ತಾನು ಮಾಡುವ ಕೆಲಸವೇ ಬಹು ಮುಖ್ಯ. ಯಾರೇ ಆಗಲಿ. ಅಧಿಕಾರ ಆಯುರ್ಮಿತ್ತುಂ.

ಕರ್ಮಂಚ ಅಧಿಕಾರ ಆಯಸ್ಸು ಕೆಲಸ ಹಣ ಇದೆಲ್ಲಾ ತಾಯಿಗರ್ಭದಲ್ಲೇ ಬರೆದಿರುತ್ತದೆ. ಅವರೆಷ್ಟು ಬಲವಂತ ಇವರೆಷ್ಟು ಬಲವಂತ ಇವರೆಷ್ಟು ಯಶವಂತ ಎನ್ನುವ ಕೊರಗಿನಲಿ

ಭವಿಷ್ಯ ನಿನಗೇ ತಿಳಿಯದೆ ಕೊರಗದಿರು ಶಿವನಿಗೆ ಕೃತಜ್ಞನಾಗಿರು ಎಂದು ಹೇಳಿದ್ದಾರೆ. ಆದ್ದರಿಂದ ನಮ್ಮ ಜೀವನದಲ್ಲಿರುವ ಪರಿಪಕ್ವತೆಯನ್ನು ಗಳಿಸಬೇಕಾಗದರೆ ನಾವು ಸಮಾಜಕ್ಕೆ ಬಂದ ಮೇಲೆ ಒಂದೇ ಸಾರಿ ಮನುಷ್ಯನಾಗಿ ಹುಟ್ಟುವುದು ಮತ್ತೆ ನಾವು ಬರಲಾರೆವು, ಒಬ್ಬ ಕವಿ ಹೇಳುತ್ತಾನೆಃ ಮತ್ತಳು ಹುಟ್ಟಿದೊಡನೆ ಅಳುತ್ತೇವೆ ಏಕೆಂದರೆ ಮಂದಮತಿಗಳ ವಿಶ್ವನಾಟ್ಯ ಶಾಲೆಗೆ ಬಂದೆವಲ್ಲಾ ಎಂದು. ಆಗ ತಾಯಿ ಅಕ್ಕರೆಯಿಂದ ಸಕ್ಕರೆ ನೀರನ್ನು ಬಾಯಿಗೆ ಹಾಕಿದಾಗ ಮಗು ಚಪ್ಪರಿಸುತ್ತಾ ಹೇಳುತ್ತದೆ. ಹುಟ್ಟಿದರೆ ಬದುಕುವಾಸೆ, ಬದುಕಿದರೆ ಮದುವೆಯಾಸೆ, ಮದುವೆಯಾದರೆ ಮಕ್ಕಳಾಸೆ, ಮಕ್ಕಳಾದರೆ ಮನೆಯಾಸೆ, ಮನೆಯಾದರೆ ಮಂತ್ರಿಯಾಸೆ ಹೀಗೆ ಆಸೆಯಿರುವ ಮನುಷ್ಯನಿಗೆ ಕೊನೆಯೇ ಇಲ್ಲ - ಇಂತಹ ಮನುಷ್ಯ ತನ್ನ ಜೀವನದಲ್ಲಿ ಸಾಧನೆಯನ್ನು ಮಾಡಿದಾಗ ಮಾತ್ರ ಆ ಸಾಧನೆ ಸಿದ್ಧಿಯನ್ನು ಕೊಡುತ್ತದೆ. ಪ್ರಸಕ್ತ ಕೃಷ್ಣಕಾಂತರು ತಮ್ಮ ಜೀವನದ 72 ವಸಂತಗಳನ್ನು ಚೆನ್ನಾಗಿ ಕಳೆದು ಜೀವನವನ್ನು ಸಮೃದ್ಧವಾಗಿ ಗಳಿಸಿ ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಭಗವಂತನು ಶಾಂತಿ ನೀಡಲಿ ಕುಟುಂಬಕ್ಕೆ ಶಾಂತಿ ನೀಡಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಒಂದು ನಿಮಿಷ ಎದ್ದುನಿಂತು ಮೌನವಾಚರಿಸಬೇಕು.

(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಚರಿಸಿತು)

ಅಧ್ಯಕ್ಷರು : ಈ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬದವರಿಗೆ ಕಳುಹಿಸಲಾಗುವುದು.

(ಸದನವು ಮುಂದೂಡಲ್ಪಟ್ಟು ಮತ್ತೆ 30.7.02 ಮಂಗಳವಾರ ಬೆಳಿಗ್ಗೆ 10ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು).